**ದಿನಾಂಕಃ 20–12–2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 5 ನೇ ಪ್ರತಿವಾದಿಪರ: ಶ್ರೀ. ಸಿ ಜೆ ಎಂ ವಕೀಲರಿಂದಃ–**

ನಾನು ಸಲ್ಲಿಸಿರುವ ದಾವೆಯ ಅಂಶಗಳು ಹಾಗೂ ನಾನು ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ತಿಳಿಸಿದ ಅಂಶಗಳನ್ನು ನಾನು ತಿಳಿದುಕೊಂಡಿರುತ್ತೇನೆ. ಎಲ್ಲವು ಸತ್ಯದಿಂದ ಕೂಡಿರುತ್ತದೆ. 1 ನೇ ಪ್ರತಿವಾದಿ ನಮ್ಮ ಊರಿನವರು ಮತ್ತು ನನ್ನ ಸಂಬಂಧಿಯಾಗಬೇಕು. 2 ನೇ ಪ್ರತಿವಾದಿ 1 ನೇ ಪ್ರತಿವಾದಿಯಾಗಿದ್ದು, 3 ಮತ್ತು 4 ನೇ ಪ್ರತಿವಾದಿಯರು 1 ಮತ್ತು 2 ನೇ ಪ್ರತಿವಾದಿಗಳ ಮಕ್ಕಳಾಗಿರುತ್ತಾರೆ. 1 ನೇ ಪ್ರತಿವಾದಿ ಜಮೀನುದಾರರು ಮತ್ತು ಕೆ.ಬಿದರೆ ಗ್ರಾಮದ ಶಾಲೆಯಲ್ಲಿ ಅಟೆಂಡರ್ ಸಹ ಆಗಿದ್ದರು, ಈಗ ನಿವೃತ್ತಿಗೊಂಡಿರುತ್ತಾರೆ. 1 ನೇ ಪ್ರತಿವಾದಿ ದಾವಾ ಆಸ್ತಿಯನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು, ಈ ದಾವಾ ಆಸ್ತಿಯನ್ನು ಹೊರತುಪಡಿಸಿ, ಇತರೆ ಆಸ್ತಿಗಳು ಇರುತ್ತವೆ ಎಂದರೆ ಸರಿ.

ನಿಪಿ.1 ರ ಪಹಣಿ ಪತ್ರಿಕೆಯಲ್ಲಿರುವ ಆಸ್ತಿಯನ್ನು 1 ರಿಂದ 4 ನೇ ಪ್ರತಿವಾದಿಯರು 5 ನೇ ಪ್ರತಿವಾದಿಗೆ ನಿಪಿ.33 ರಂತೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿಯು ನನಗೆ ಸೇರಿದ ಆಸ್ತಿಯನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ.2 ರ ಸರ್ವೆ ನಂ.83/2 ಎ 1 ರಲ್ಲಿರುವ ಆಸ್ತಿಗೆ ನಾನೇ ಮಾಲೀಕನಾಗಿದ್ದು, ಸದರಿ ಆಸ್ತಿಯಲ್ಲಿ ನಾನು ಸ್ವಾಧೀನದಲ್ಲಿ ಇರುತ್ತೇನೆ ಎಂದರೆ ಸರಿಯಲ್ಲ. ನಿಪಿ.2 ರ ಪಹಣಿಯಲ್ಲಿರುವ ಆಸ್ತಿಯು ನನಗೆ ಸೇರಿದ್ದಾಗಿರುವುದಿಲ್ಲ. ನಿಪಿ.2 ರ ಪಹಣಿಯನ್ನು ನಾನು ನನ್ನ ಆಸ್ತಿ ಬದಲಾವಣೆಯಾಗಿರುತ್ತದೆ ಎಂದು ತೋರಿಸಲು ಹಾಜರುಪಡಿಸಿರುತ್ತೇನೆ. ಸಾಕ್ಷಿ

ಮುಂದುವರೆದು 83/1 ನನ್ನ ಸರ್ವೆ ನಂಬರು ಆಗಿದ್ದು, ನಿಪಿ.2 ರಂತೆ ಬದಲಾವಣೆಯಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ.2 ರ ಪಹಣಿಯು ನನ್ನದಾಗಿರುವುದಿಲ್ಲ, ಅದು ಯಾವಾಗ ಬದಲಾವಣೆಗೊಂಡಿರುತ್ತದೆ ಎಂದು ನನಗೆ ಗೊತ್ತಿಲ್ಲ.

ನಿಪಿ.2 ರ ಪಹಣಿ ಪತ್ರಿಕೆಯು ಐಎನ್.ಹೆಚ್.4/78-79 ರಂತೆ ವಿಭಜನೆ ಮೂಲಕ ನನಗೆ ಬಂದಿರುತ್ತದೆ ಎಂದರೆ ಸರಿ. ಅದೇ ರೀತಿ 1 ನೇ ಪ್ರತಿವಾದಿಗೂ ಸಹ ನಿಪಿ.3 ರಂತೆ 1 ಎಕರೆ 20 ಗುಂಟೆ ಆಸ್ತಿ ಇತ್ತು ಎಂದರೆ ಸರಿ. 1 ನೇ ಪ್ರತಿವಾದಿಗೆ ಸರ್ವೆ ನಂಬರು 83/2 ಎ 1 ರಲ್ಲಿ 1 ಎಕರೆ 20 ಗುಂಟೆ ಆಸ್ತಿ ಇದ್ದುದ್ದರಿಂದ ಅದನ್ನು 5 ನೇ ಪ್ರತಿವಾದಿಗೆ ನಿಪಿ.33 ರಂತೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನಿಪಿ.3 ರ ಆಸ್ತಿಯನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡುವ ಮೊದಲು 1 ನೇ ಪ್ರತಿವಾದಿಯು ಸ್ವಾಧೀನದಲ್ಲಿ ಇದ್ದರು ಎಂದರೆ ಸರಿ. 5 ನೇ ಪ್ರತಿವಾದಿಯು ನಿಪಿ.3 ರ ಆಸ್ತಿಯನ್ನು 1 ನೇ ಪ್ರತಿವಾದಿಯಿಂದ ಖರೀದಿಸಿದ ನಂತರ 5 ನೇ ಪ್ರತಿವಾದಿಯೇ ಸ್ವಾಧೀನದಲ್ಲಿರುತ್ತಾರೆ ಎಂದರೆ, ಸಾಕ್ಷಿ ಮುಂದುವರೆದು 5 ನೇ ಪ್ರತಿವಾದಿಯು ತಾನು ಖರೀದಿಸಿದ ಆಸ್ತಿಯನ್ನು ಬಿಟ್ಟು ನನ್ನ ಆಸ್ತಿಯಾದ ಸರ್ವೆ ನಂ.83/1 ರ ಆಸ್ತಿಗೆ ಸ್ವಾಧೀನಕ್ಕೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ.

ನಿಪಿ.33 ರ ಕ್ರಯ ಪತ್ರವು ದಿನಾಂಕ 11.02.2020 ರಲ್ಲಿ ಆಗಿರುತ್ತದೆ ಎಂದರೆ ಸರಿ. ಸದರಿ ದಿನದಿಂದ 5 ನೇ ಪ್ರತಿವಾದಿಯು ನನ್ನ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುತ್ತಾರೆ. ದಿನಾಂಕ 11.02.2020 ರಲ್ಲಿ 5 ನೇ ಪ್ರತಿವಾದಿ ನನ್ನ ಆಸ್ತಿಯ ಸ್ವಾಧೀನವನ್ನು ತಪ್ಪಿಸಿದ ನಂತರ ನಾನು 5 ನೇ ಪ್ರತಿವಾದಿಯ ವಿರುದ್ಧ ಪೊಲೀಸ್ ಠಾಣೆ ದೂರನ್ನು ನೀಡಲು ಹೋಗಿರುತ್ತೇನೆ. ಪೊಲೀಸರು ಇದು ಸಿವಿಲ್ ವ್ಯಾಜ್ಯ ಆಗಿದ್ದರಿಂದ ಇದನ್ನು ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ಹೇಳಿ ಕಳುಹಿಸುತ್ತಾರೆ. ನನ್ನ

ಸ್ವಾಧೀನವನ್ನು ತಪ್ಪಿಸಲು 5 ನೇ ಪ್ರತಿವಾದಿ, ಆತನ ತಂದೆ ಮತ್ತು ಅವರ ಇಬ್ಬರು ಸಹೋದರರು ಬಂದಿರುತ್ತಾರೆ. ಪೊಲೀಸರು ನನ್ನ ದೂರನ್ನು ತೆಗೆದುಕೊಳ್ಳದಿದ್ದ ಬಗ್ಗೆ ನಾನು ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ವಿಚಾರಗಳನ್ನು ನನ್ನ ದಾವೆಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಗೆ ಮತ್ತು ಆತನ ಮನೆಯವರಿಗೆ ನನ್ನ ವಕೀಲರ ಮೂಲಕ ನನ್ನ ಸ್ವಾಧೀನವನ್ನು ತಪ್ಪಿಸಿದ ಕುರಿತು ಯಾವುದೇ ನೋಟೀಸನ್ನು ನೀಡಿರುವುದಿಲ್ಲ.

ನಿಪಿ.3 ರಂತೆ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದ 1 ಎಕರೆ 20 ಗುಂಟೆ ಆಸ್ತಿಯು 5 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರೂ ಸಹ ಸದರಿ ಆಸ್ತಿಯು 5 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ಉತ್ತರಿಸಿರುತ್ತಾರೆ. 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದ ನಿಪಿ.3 ರ ಆಸ್ತಿಯನ್ನು 1 ನೇ ಪ್ರತಿವಾದಿಯೇ ಸಾಗುವಳಿ ಮಾಡುತ್ತಿದ್ದಾನಾ ಎಂಬ ಪ್ರಶ್ನೆಗೆ ಸಾಕ್ಷಿಯು ಯಾರು ಸಾಗುವಳಿ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಿಪಿ.6 ರ ಕ್ರಯ ಪತ್ರದಂತೆ ಸರ್ವೆ ನಂ.83/1 ರಲ್ಲಿ 1 ಎಕರೆ 20 ಗುಂಟೆ ಆಸ್ತಿಯನ್ನು ನನ್ನ ಚಿಕ್ಕಪ್ಪನ ಮಗನಾದ ಟಿ.ಬಿ.ಕುಮಾರಪ್ಪರವರು ಜಾನಸಾಬ್ ರವರಿಂದ ಖರೀದಿಸಿದ್ದರು ಎಂದರೆ ಸರಿ. ನಿಪಿ.7 ರ ವಿಭಾಗ ಪತ್ರದಂತೆ ನನ್ನ ತಂದೆ ರುದ್ರಪ್ಪಶೆಟ್ಟಿ ಮತ್ತು ನನ್ನ ಚಿಕ್ಕಪ್ಪನ ಮಗನಾದ ಟಿ.ಬಿ.ಕುಮಾರಪ್ಪರವರ ನಡುವೆ ಆದ ವಿಭಾಗದಲ್ಲಿ ನಿಪಿ.6 ರ ಕ್ರಯ ಪತ್ರದಂತೆ ಜಾನಸಾಬ್ ರವರಿಂದ ಖರೀದಿಸಿದ ಆಸ್ತಿಯು ನನ್ನ ತಂದೆಯ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ. ನಿಪಿ.7 ರ ವಿಭಾಗ ಪತ್ರದಂತೆ ಸರ್ವೆ ನಂ.83/1 ರ ಆಸ್ತಿಯು ಮಾತ್ರ ನನ್ನ ತಂದೆಯ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ. ಸರ್ವೆ ನಂ.83/1 ರಲ್ಲಿ ಜಾನಸಾಬ್ ರವರಿಂದ ಖರೀದಿಸಿದ ಆಸ್ತಿಯು ನಿಪಿ.7 ರ ವಿಭಾಗ ಪತ್ರದಂತೆ ನನ್ನ ತಂದೆಯ ಹಿಸ್ಸೆಗೆ ಬಂದ 1 ಎಕರೆ 20 ಗುಂಟೆ ಆಸ್ತಿಯನ್ನು

ಹೊರತುಪಡಿಸಿ, ಸದರಿ ಸರ್ವೆ ನಂ.83 ರಲ್ಲಿ ಬೇರೆ 1 ಎಕರೆ 20 ಗುಂಟೆ ಆಸ್ತಿ ಇರುವುದಿಲ್ಲ ಎಂದರೆ ಸರಿ.

ನನ್ನ ತಂದೆಯು ಜೀವಂತ ಇದ್ದಾಗ ನನ್ನ ತಂದೆಯ ಹಿಸ್ಸೆಗೆ ಸರ್ವೆ ನಂ.83 ರಲ್ಲಿ ಬಂದ 1 ಎಕರೆ 20 ಗುಂಟೆ ಆಸ್ತಿಯನ್ನು ಬಾಬಾಸಾಹೇಬ್ ಎಂಬುವವರೊಂದಿಗೆ ಅದಲು-ಬದಲು ಮಾಡಿಕೊಂಡು ಬಾಬಾಸಾಹೇಬ್ ರವರಿಗೆ ಸೇರಿದ ಇದೇ ಸರ್ವೆ ನಂಬರಿನಲ್ಲಿ 1 ಎಕರೆ 20 ಗುಂಟೆ ಆಸ್ತಿಯನ್ನು ನಿಪಿ.5 ರಂತೆ ಅದಲು-ಬದಲು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಈ ರೀತಿ ಅದಲು-ಬದಲು ಮಾಡಿಕೊಂಡ ನಂತರ ನನ್ನ ತಂದೆಯ ಜೀವಿತ ಅವಧಿಯವರೆಗು ನನ್ನ ತಂದೆ ಸ್ವಾಧೀನದಲ್ಲಿ ಇದ್ದು, ಅವರ ಮರಣದ ನಂತರ ನನ್ನ ಸ್ವಾಧೀನ ಅನುಭವಕ್ಕೆ ಬಂದಿರುತ್ತದೆ ಎಂದರೆ ಸರಿ. ನಿಪಿ.2 ರಲ್ಲಿ ಇರುವ ಆಸ್ತಿಯು ನನ್ನ ತಂದೆ ಬಾಬಾಸಾಹೇಬ್ ರವರಿಂದ ಅದಲು-ಬದಲು ಮಾಡಿಕೊಂಡ ಆಸ್ತಿಯಾಗಿರುತ್ತದೆ ಎಂದರೆ ಸರಿ. ನಿಪಿ.2 ರ ಆಸ್ತಿಯಲ್ಲಿ ನಾನು ಈಗ ನಾನು ಸ್ವಾಧೀನದಲ್ಲಿ ಇರುತ್ತೇನೆ ಎಂದರೆ ಸರಿಯಲ್ಲ. ಸ್ವಾಕ್ಷಿ ಮುಂದುವರೆದು ಸರ್ವೆ ನಂ.83 ರಲ್ಲಿ ಈಗ ನನಗೆ ಯಾವುದೇ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇಲ್ಲದೆ ನನಗೆ ಆಸ್ತಿ ಇಲ್ಲದಂತೆ ಆಗಿರುತ್ತದೆ ಎಂದು ನುಡಿಯುತ್ತಾರೆ.

ನನ್ನ ವಾದ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದ 2 ನೇ ಖಂಡಿಕೆಯಲ್ಲಿ ತಿಳಿಸಿದಂತೆ ಸರ್ವೆ ನಂ.83/2 ಎ 1 ಹಳೆ ಸರ್ವೆ ನಂ.83/1 ರ 1 ಎಕರೆ 20 ಗುಂಟೆ ಆಸ್ತಿಗೆ ನಾನೆ ಮಾಲೀಕನಾಗಿದ್ದು, ಸ್ವಾಧೀನಾನುಭವನ್ನು ಹೊಂದಿರುತ್ತೇನೆ ಎಂದು ತಿಳಿಸಿರುತ್ತೇನೆ ಎಂದರೆ ಸರಿ. ಬಾಬಾಸಾಹೇಬ್ ರವರಿಂದ ನನ್ನ ತಂದೆಯವರು ಅದಲು-ಬದಲು ಮಾಡಿಕೊಂಡ ಆಸ್ತಿಯಲ್ಲಿ ಇಂದಿಗೂ ನಾನೇ ಸ್ವಾಧೀನದಲ್ಲಿ ಇರುತ್ತೇನೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯು ಮತ್ತು ಆತನ ಮನೆಯವರು ನಿಪಿ.33 ರಂತೆ ಕ್ರಯ ಪತ್ರ ಆದ ನಂತರ ನನ್ನ ಸ್ವಾಧೀನವನ್ನು ತಪ್ಪಿಸಿರುತ್ತಾರೆ ಎಂದು

ನಾನು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು ಕಡೂರು.